ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017-18 ದಿನಾಂಕ:30-05-2017

**PRESS NOTE**

The Town Hall meeting on GST was attended by Dr.HasmukhAdhia, Revenue Secretary, Ministry of Finance, Government of India, Sri Krishna Byre Gowda, Hon'ble Minister for Agriculture, Government of Karnataka and the representative of Karnataka in the GST Council, Sri Vinod Kumar, Chief Commissioner, Central Excise, Sri I.S.N. Prasad, Additional Chief Secretary, Finance Department, Government of Karnataka and Sri Ritvik Pandey, Commissioner for Commercial Taxes, Karnataka. More than 1200 members from Trade and Industry participated in the meeting.

Sri Vinod Kumar, in his welcome address, emphasized on the importance of outreach and briefed about the outreach programme of the Central Government. He also informed about the twitter handle GST@GoI and askGST_GoIcreated for quelling doubts about GST.

Sri I.S.N.Prasad highlighted that Karnataka has always been supporting GST irrespective of the party in office. He stated that the entire process of finalising the laws relating to GST has been a path breaking process. He assured the Revenue Secretary that the State Government will make all its efforts in ensuring smooth implementation of GST.

Sri Basavaraj, Additional Commissioner, Service Tax, made a detailed presentation on GST covering salient features of GST proposed to be implemented. He explained the benefits of GST and stated that it will replace a large number of Central and State taxes. He explained about the liability to pay tax and composition schemes. He also detailed about the processes for filing return and claiming refunds. He highlighted the basic philosophy behind rate structure in GST.

This was followed by a question and answer session, where many people raised their doubts and gave their suggestions.

Sri HasmukhAdhia, stated that due to the political maturity shown by all political partiesGST will be a reality in our country, although many people doubted whether GST can be implemented. He confirmed that GST will be introduced with effect from 1st July 2017 and we should all work towards it. He acknowledged Karnataka's contribution in framing of the policy framework of GST. He highlighted that India has growth potential and GST will act as a game changer in meeting this aspiration. He informed that a study done by US Federal Reserve has indicated that GST in India will propel GDP growth by 4%.

He explained the basic philosophy behind fixation of rates and explained that to arrive at the GST rate, the weighted average of VAT in all States has been taken. He explained that while restaurants enjoy 4% composition in Karnataka, in many other states they attract standard rate of tax. He agreed that there is

a scope for rationalisation and informed that only 19% items are in 28% bracket and 43% items are falling in 18% rate slab. He also explained how construction sector will benefit in GST and that housing will become cheaper in Karnataka. He explained the details of provisions related to transition credit. He detailed the process of filing GST returns stating that there are many myths about filing GST returns. He highlighted that the ITC matching system promotes compliance and discourages evasion. He assured that all representations on tax rates will be analysed and Council will take a call on all representations.

Sri Krishna Byre Gowda, expressed that it is a matter of privilege and pride for him to represent state in an all-important body like GST Council. He praised Hon'ble Union Finance Minister, Sri ArunJaitley and Revenue Secretary, Sri HasmukhAdhia, for conducting GST process in an extremely democratic way allowing participation by everybody. He said that our aspirations can only be optimally met if we simplify our compliance requirement and bring in place common systems across State boundaries. He said that deliberations in GST Council have been of top quality and extremely objective. He explained that the rate fitment exercise and assured that in GST the general rate of taxation will come down. He stated that even with lower level of taxes with higher compliance, more revenue will flow in. He said that Karnataka is at the top of the ladder in preparedness for GST. While there are challenges, it will be our endeavour to make the ride smooth. He hoped that GST structure will simplify further as compliance improves.

The Town Hall meeting held in Bengaluru ended with Vote of Thanks.

## ಪತ್ರಿಕಾ ಪ್ರಕಟಣೆ

## ವಿದ್ವಾನ್ ಟಿ. ಹೆಚ್. ವಿನಾಯಕರಾಮ್ ಅವರಿಗೆ

## ಸಚಿವೆ ಉಮಾಶ್ರೀ ಅವರಿಂದ ಟಿ. ಚೌಡಯ್ಯ ಪ್ರಶಸ್ತಿ ಪ್ರದಾನ

**ಬೆಂಗಳೂರು, ಮೇ 30 (ಕರ್ನಾಟಕ ವಾರ್ತೆ)**

ಶಾಸ್ತ್ರೀಯ ಸಂಗೀತದಲ್ಲಿ ಗಣನೀಯ ಸಾಧನೆ ಮಾಡಿರುವ ಚೆನ್ನೈನ ಘಟಂ ವಾದ್ಯ ಕಲಾವಿದ ವಿಕ್ಕುಲ್ ವಿನಾಯಕ ಎಂದೇ ಖ್ಯಾತರಾಗಿರುವ ತೇತಕುಡಿ ಹರಿಹರ ವಿನಾಯಕರಾಮ್ ಅವರಿಗೆ ಕನ್ನಡ ಮತ್ತು ಸಂಸ್ಕೃತಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಉಮಾಶ್ರೀ ಅವರು 2016 ನೇ ಸಾಲಿನ ಟಿ. ಚೌಡಯ್ಯ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮಾಡಿದರು.

ಇಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಜೆ.ಸಿ. ರಸ್ತೆಯ ಕನ್ನಡ ಭವನದ 'ಅಂತರಂಗ' ಸಭಾಂಗಣದಲ್ಲಿ ಹಮ್ಮಿಕೊಳ್ಳಲಾದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವೆ ಉಮಾಶ್ರೀ ಅವರು ಇತರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲೇ ಅತಿ ಹೆಚ್ಚು ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ಮುಂದಿನ ವರ್ಷ ಪ್ರಶಸ್ತಿ ಮೊತ್ತವನ್ನು ಹೆಚ್ಚಿಸಲಾಗುವುದು ಎಂದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಕಲಾವಿದ ಹಾಗೂ ಚೌಡಯ್ಯ ಪ್ರಶಸ್ತಿ ಪುರಸ್ಕೃತ ತೇತಕುಡಿ ಹರಿಹರ ವಿನಾಯಕರಾಮ್ ವಿದ್ವಾನ್ ಟಿ. ಚೌಡಯ್ಯ ಅವರ ಜೊತೆ ಅನೇಕ ಸಂಗೀತ ಕಚೇರಿಗಳಲ್ಲಿ ಭಾಗವಹಿಸಿದ್ದೇನೆ. ಈ ಪ್ರಶಸ್ತಿ ದೊರಕಿರುವುದು ತುಂಬಾ ಸಂತಸ ತಂದಿದೆ ಎಂದರು.

ಇವರು ಅನೇಕ ಸಂಗೀತ ಕಚೇರಿಗಳಲ್ಲಿ ಭಾಗವಹಿಸಿದ್ದು, ಸಂಗೀತ ಆಲ್ಬಂ, ತಾಳವಾದ್ಯ ಕಚೇರಿ ನೀಡಿದ್ದಾರೆ. ಶ್ರೀಯುತರಿಗೆ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಫೆಲೋಶಿಫ್ ಗೌರವ, ಪದ್ಮಶ್ರೀ ಮತ್ತು ಪದ್ಮಭೂಷಣ ಗೌರವ ಪುರಸ್ಕಾರಗಳು ಸೇರಿದಂತೆ ಹಲವು ಸನ್ಮಾನಗಳು ಸಂದಿವೆ.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಎಂ.ಎಸ್. ಅರ್ಚನಾ ಉಪಸ್ಥಿತರಿದ್ದರು.

**ಎಸ್‌ಎಂ/ಕೆಎನ್‌ಕೆ/ಜಿಪಿಆರ್.**

# <u>ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ</u>

**ಬೆಂಗಳೂರು, ಮೇ 30 (ಕರ್ನಾಟಕ ವಾರ್ತೆ)**

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ 133ನೇ ಜಯಂತಿಯನ್ನು ಜೂನ್ 4 ರಂದು ಭಾನುವಾರ ಬೆಳಿಗ್ಗೆ 11–00 ಗಂಟೆಗೆ ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು ಇಲ್ಲಿ ಹಮ್ಮಿಕೊಂಡಿದೆ.

ಕನ್ನಡ ಮತ್ತು ಸಂಸ್ಕೃತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವೆ ಶ್ರೀಮತಿ ಉಮಾಶ್ರೀ ಅವರು ಸಮಾರಂಭದ ಉದ್ಘಾಟನೆಯನ್ನು ನೆರವೇರಿಸಲಿದ್ದಾರೆ.

ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಹಾಗೂ ಸಂಸದೀಯ ವ್ಯವಹಾರಗಳ ಖಾತೆ ಸಚಿವ ಅನಂತಕುಮಾರ್, ನಗರಾಭಿವೃದ್ಧಿ ಮತ್ತು ನಗರ ಯೋಜನೆ ಹಾಗೂ ಬೆಂಗಳ್ರರು ನಗರ ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ. ಜಾರ್ಜ್, ಬೃಹತ್ ಬೆಂಗಳೂರು ಮಹಾನಗರಪಾಲಿಕೆಯ ಮಹಾಪೌರರಾದ ಶ್ರೀಮತಿ ಜಿ. ಪದ್ಮಾವತಿ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಆರ್. ವಿ. ದೇವರಾಜ್, ಅಧ್ಯಕ್ಷರು, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ ಹಾಗೂ ಶಾಸಕರು, ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರ ಇವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

ಶಾಸಕರು, ಪುತ್ತೂರು ವಿಧಾನಸಭಾ ಕ್ಷೇತ್ರ ಹಾಗೂ ಸಂಸದೀಯ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಶ್ರೀಮತಿ ಶಕುಂತಲಾ ವಿ. ಶೆಟ್ಟಿ ಅವರು ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು. ಮೈಸೂರು ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಉಪನ್ಯಾಸಕ ಡಾ. ವಿ. ಎಂ. ರಮೇಶ್ ಅವರು ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಅಂದು ಬೆಳಿಗ್ಗೆ 10–00 ಗಂಟೆಗೆ ಹಾಸನ ಜಿಲ್ಲೆ ಜಯರಾಮ ಮತ್ತು ತಂಡದಿಂದ 'ಸೋಮನ ಕುಣಿತ', ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಡಿ. ಎಸ್. ರುದ್ರೇಶ್ ಮತ್ತು ತಂಡದಿಂದ 'ವೀರಗಾಸೆ,' ಶಿವಮೊಗ್ಗ ಜಿಲ್ಲೆಯ ವೈ. ಮಂಜುನಾಥ ಮತ್ತು ತಂಡದಿಂದ 'ಡೊಳ್ಳು ಕುಣಿತ', ಮಂಡ್ಯ ಜಿಲ್ಲೆ ಪುಟ್ಟಸ್ವಾಮಿ ಮತ್ತು ತಂಡದಿಂದ 'ಪೂಜಾ ಕುಣಿತ' ಹಾಗೂ ರಾಮನಗರ ಜಿಲ್ಲೆ ವೆಂಕಟೇಶ್ ಮತ್ತು ತಂಡದಿಂದ 'ತಮಟೆ ವಾದನ ' ಜಾನಪದ ಕಲಾ ತಂಡಗಳ ಪ್ರದರ್ಶನ ನಡೆಯಲಿದೆ.

ಅಂದು ಬೆಳಿಗ್ಗೆ 10.00 ಗಂಟೆಯಿಂದ 11 ಗಂಟೆವರೆಗೆ ಬೆಂಗಳೂರಿನ ವಿದ್ವಾನ್ ನಾಗಭೂಷಣ್ ಮತ್ತು ತಂಡದಿಂದ 'ಭರತನಾಟ್ಯ' ಕಾರ್ಯಕ್ರಮ ನಡೆಯಲಿದೆ.

ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ ಹಾಗೂ ಕರ್ನಾಟಕ ಲಲಿತಕಲಾ ಅಕಾಡೆಮಿ ವತಿಯಿಂದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜೀವನ ಸಾಧನೆಯ ವಿವಿಧ ಛಾಯಾಚಿತ್ರ ಪ್ರದರ್ಶನವನ್ನು ಇದೇ ಸಂದರ್ಭದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಕಟಣೆ ತಿಳಿಸಿದೆ.

ಎಸ್‌ಎಂ/ಜೆಡಿ/ಜಿಪಿಆರ್.

# ಅರಣ್ಯ ಸಚಿವರಿಂದ ಪರಿಹಾರದ ಚೆಕ್ ವಿತರಣೆ

**ಬೆಂಗಳೂರು, ಮೇ 30 (ಕರ್ನಾಟಕ ವಾರ್ತೆ)**

ಬಂಡಿಪುರ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯ ಅರಣ್ಯದಲ್ಲಿ ಕಾಣಿಸಿಕೊಂಡ ಬೆಂಕಿಯನ್ನು ನಂದಿಸುವ ಸಂದರ್ಭದಲ್ಲಿ ಮೃತಪಟ್ಟ ಅರಣ್ಯ ರಕ್ಷಕ ಮುರುಗಪ್ಪ ತಮ್ಮಗೋಳ ಅವರಿಗೆ ಹುಲಿ ಸಂರಕ್ಷಿತ ಪ್ರತಿಷ್ಠಾನದಿಂದ 25 ಲಕ್ಷ ರೂಪಾಯಿ, ಭಾರತೀಯ ಅರಣ್ಯ ಸೇವೆ ವೃಂದ ಅಧಿಕಾರಿಗಳಿಂದ ಸ್ವೀಕೃತಗೊಂಡ 4 ಲಕ್ಷ ರೂ ಹಾಗೂ ಅರಣ್ಯ ವಸತಿ ವಿಹಾರಧಾಮ ಸಂಸ್ಥೆಯಿಂದ ಸಂಗ್ರಹವಾಗಿರುವ 2 ಲಕ್ಷ ರೂ. ಚೆಕ್‌ನ್ನು ಸಹ ಅರಣ್ಯ ಸಚಿವ ಬಿ. ರಮಾನಾಥ್ ರೈ ಅವರು ಮೃತರ ತಾಯಿ ಅವರಿಗೆ ಹಸ್ತಾಂತರಿಸಿದರು.

ವಿಧಾನಸೌಧದ ಅರಣ್ಯ ಸಚಿವರ ಕೊಠಡಿಯಲ್ಲಿ ಇಂದು ನಡೆದ ಕಾರ್ಯಕ್ರಮದಲ್ಲಿ ಇತ್ತೀಚೆಗೆ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಸಿ.ಆರ್.ಪಿ.ಎಫ್. ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ದಕ್ಷಿಣಮೂರ್ತಿ ಮತ್ತು ಪುಟ್ಟಣ್ಣ ಲಮಾಣಿ ಅವರ ಕುಟುಂಬಕ್ಕೆ ತಲಾ 5 ಲಕ್ಷ ರೂ ಗಳ ಪರಿಹಾರದ ಚೆಕ್‌ನ್ನು ಅರಣ್ಯ ಸಚಿವರು ವಿತರಿಸಿದರು.

ಈ ಇಬ್ಬರು ಯೋಧರು ಕಾಡಾನೆ ದಾಳಿಗೆ ಸಿಲುಕಿ ಕಳೆದ ಮೇ 7 ರಂದು ಸಾವಿಗೀಡಾಗಿದ್ದರು.

ಚೆಕ್ ವಿತರಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅರಣ್ಯ ಸಚಿವ ರಮಾನಾಥ್ ರೈ ಅವರು ಅಭಯಾರಣ್ಯದಲ್ಲಿ ಬೆಂಕಿ ದುರಂತಗಳ ಆಕಸ್ಮಿಕಗಳನ್ನು ತಪ್ಪಿಸಲು ಅಗ್ನಿಶಾಮಕ ಹಾಗೂ ಅರಣ್ಯ ಇಲಾಖೆ ಜಂಟಿಯಾಗಿ ತಾತ್ಕಾಲಿಕ ಅಗ್ನಿಶಾಮಕ ಕೇಂದ್ರವನ್ನು ಆರಂಭಿಸಲು ಇಲಾಖೆ ಉದ್ದೇಶಿಸಿದೆ ಎಂದರು. ಅರಣ್ಯದಲ್ಲಿ ಕಾಡ್ಗಿಚ್ಚಿಗೆ ಶಾಶ್ವತ ಪರಿಹಾರ ಕಂಡುಹಿಡಿಯಲು ಅಧಿಕಾರಿಗಳು ಕಾರ್ಯಪ್ರವೃತ್ತರಾಗಿದ್ದಾರೆ. ಮಳೆಗಾಲ ಆರಂಭಗೊಳ್ಳುತ್ತಿರುವ ಮುನ್ನ ರಾಜ್ಯಾದ್ಯಂತ 6 ಕೋಟಿ ಸಸಿಗಳನ್ನು ರಸ್ತೆ ಬದಿ ನಡುತೋಪುಗಳಲ್ಲಿ ನೆಡಲು ನರ್ಸರಿ ಏಜೆನ್ಸಿ ಮೂಲಕ ಕಸಿ ಸಸಿಗಳನ್ನು ನೆಡಲಾಗುವುದು ಎಂದು ಅರಣ್ಯ ಸಚಿವರು ತಿಳಿಸಿದರು.

ಕಾಡಿನಿಂದ ನಾಡಿಗೆ ಆನೆಗಳ ದಾಳಿ ತಪ್ಪಿಸಲು ಪ್ರಾಯೋಗಿಕವಾಗಿ ನಾಗರಹೊಳೆ, ಬಂಡಿಪುರ ಮತ್ತು ಬನ್ನೇರುಘಟ್ಟ ಅರಣ್ಯ ಪ್ರದೇಶಗಳಲ್ಲಿ ಕಂದಕ ತೋಡಿ ಉಕ್ಕಿನ ಪಟ್ಟಿ ಮೇಲೆ ಸೌರ ಬೇಲಿಯನ್ನು ಅಳವಡಿಸಲಾಗಿದೆ. ಈ ಯೋಜನೆ ಯಶಸ್ವಿಯಾದಲ್ಲಿ ರಾಜ್ಯದ ಇತರ ಅರಣ್ಯ ಪ್ರದೇಶಗಳಲ್ಲಿರುವ ಆನೆಗಳ ಕಾರಿಡಾರ್‌ಗಳಲ್ಲೂ ಅಳವಡಿಸಲು ಉದ್ದೇಶಿಸಲಾಗಿದೆ ಎಂದು ಅರಣ್ಯ ಸಚಿವರು ತಿಳಿಸಿದರು.

ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರವಿಕುಮಾರ್, ಕಾರ್ಯದರ್ಶಿ ವಿಜಯಕುಮಾರ್ ಗೂಗಿ, ಅರಣ್ಯ ಇಲಾಖೆಯ ಮುಖ್ಯಸ್ಥರು ಹಾಗೂ ಸಿ.ಆರ್.ಪಿ.ಎಫ್. ನ ಕಮಾಂಡ್ ಸೇರಿದಂತೆ ಇತರ ಹಿರಿಯ ಅಧಿಕಾರಿಗಳು ಹಾಜರಿದ್ದರು.

ಎಸ್‌ಎಂ/ಕೆಪಿಪಿ/ಜಿಪಿಆರ್.

# ರಾಜ್ಯ ಮಟ್ಟದ ಜನಪರ ಶಿಲಾ ಶಿಲ್ಪಕಲಾ ಶಿಬಿರ

**ಬೆಂಗಳೂರು, ಮೇ 30 (ಕರ್ನಾಟಕ ವಾರ್ತೆ)**

ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು ಇವರ ಸಹಯೋಗದೊಂದಿಗೆ ರಾಜ್ಯ ಮಟ್ಟದ ಜನಪರ ಶಿಲ್ಪಕಲಾ ಶಿಬಿರವನ್ನು ಜೂನ್ 2 ರಿಂದ 16 ರವರೆಗೆ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರದ ಆವರಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಇಲ್ಲಿ ಹಮ್ಮಿಕೊಂಡಿದೆ.

ಈ ಸಮಾರಂಭ ಉದ್ಘಾಟನೆಯನ್ನು ಜೂನ್ 2 ರಂದು 11.00 ಗಂಟೆಗೆ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು ಇಲ್ಲಿ ಏರ್ಪಡಿಸಿದೆ.

ಈ ಶಿಬಿರದ ಉದ್ಘಾಟನೆಯನ್ನು ಖ್ಯಾತ ಬಂಡಾಯ ಸಾಹಿತಿಗಳು ಹಾಗೂ ಚಲನಚಿತ್ರ ನಿರ್ದೇಶಕರು ನೆರವೇರಿಸಲಿದ್ದಾರೆ. ಈ ಸಮಾರಂಭದ ಅಧ್ಯಕ್ಷತೆಯನ್ನು ಪ್ರೊ. ಎಂ. ಮುನಿರಾಜು ಕುಲಪತಿಗಳು (ಪ್ರಭಾರ) ಬೆಂಗಳೂರು ವಿಶ್ವವಿದ್ಯಾಲಯ ಇವರು ವಹಿಸಲಿದ್ದಾರೆ. ಕರ್ನಾಟಕ ಚಿತ್ರಕಲಾ ಪರಿಷತ್ ಕಾರ್ಯದರ್ಶಿ ಎಂ.ಜೆ. ಕಮಲಾಕ್ಷಿ, ಬೆಂಗಳೂರು ವಿಶ್ವವಿದ್ಯಾಲಯ ಸದಸ್ಯ ವಿ. ಶಿವಣ್ಣ ಹಾಗೂ ಅಶೋಕ ಎನ್. ಚಲುವಾದಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಆಡಳಿತಾಧಿಕಾರಿ ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಇವರು ಭಾಗವಹಿಸಲಿದ್ದಾರೆ.

**ಎಸ್‌ಎಂ/ಜೆಡಿ/ಜಿಪಿಆರ್.**

# ಗ್ರಾಮೀಣ ಸೇವೆ ನಿರಾಕರಿಸಿದ 216 ವೈದ್ಯರುಗಳಿಗೆ ನೋಟೀಸು

**ಬೆಂಗಳೂರು, ಮೇ 30 (ಕರ್ನಾಟಕ ವಾರ್ತೆ)**

ಗ್ರಾಮೀಣ ಸೇವೆ ಮಾಡಲು ಮುಚ್ಚಳಿಕೆ ಬರೆದುಕೊಟ್ಟು ನಂತರ ನಿರಾಕರಿಸಿದ 216 ವೈದ್ಯರುಗಳಿಗೆ ಕರ್ನಾಟಕ ವೈದ್ಯಕೀಯ ಮಂಡಳಿ ನೋಟೀಸು ಜಾರಿ ಮಾಡಿದೆ.
ಈ ನೋಟೀಸಿಗೆ 15 ದಿನದೊಳಗೆ ಸೂಕ್ತ ಉತ್ತರ ನೀಡುವಂತೆ ಈ ವೈದ್ಯರುಗಳಿಗೆ ಮಂಡಳಿಯು ಸೂಚಿಸಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಅವರ ಈ ಕುರಿತು ಕರ್ನಾಟಕ ಕ್ರಮ ಜರುಗಿಸುವಂತೆ ಕರ್ನಾಟಕ ವೈದ್ಯಕೀಯ ಮಂಡಳಿಗೆ ಪತ್ರ ಬರೆದಿದ್ದರು. ಅದರಂತೆ ಮಂಡಳಿಯು ನೋಟಿಸ್ ಜಾರಿ ಮಾಡಿದೆ.

# ವೈದ್ಯರು ಮತ್ತು ಗ್ರೂಪ್ ಡಿ ನೌಕರ ಅಮಾನತು

**ಬೆಂಗಳೂರು, ಮೇ 30 (ಕರ್ನಾಟಕ ವಾರ್ತೆ)**

ಕರ್ತವ್ಯ ಲೋಪ ಮತ್ತು ದುರ್ನಡತೆಯ ಕಾರಣಗಳಿಂದ ಬೆಂಗಳೂರಿನ ಜಯನಗರ ಸಾರ್ವಜನಿಕ ಆಸ್ಪತ್ರೆಯ ಉಪ ಮುಖ್ಯ ವೈದ್ಯಾಧಿಕಾರಿ ಡಾ. ನಾಗಲಕ್ಷ್ಮಮ್ಮ ಹಾಗೂ ಚಿಂತಾಮಣಿ ತಾಲ್ಲೂಕು ಬಟ್ಲಹಳ್ಳಿ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಪಿ.ಎಂ. ರವಿ ಮತ್ತು ಜಯನಗರ ಆಸ್ಪತ್ರೆಯ ಡಿ' ಗ್ರೂಪ್ ನೌಕರ ಟಿ.ಎಚ್. ರವಿಕುಮಾರ್ ಅವರನ್ನು ಅಮಾನತುಗೊಳಿಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಯುಕ್ತ ಸುಬೋಧ್ ಯಾದವ್ ಅವರು ಆದೇಶ ಹೊರಡಿಸಿದ್ದಾರೆ.
ಜಯನಗರ ಸಾರ್ವಜನಿಕ ಆಸ್ಪತ್ರೆಯ ಉಪ ಮುಖ್ಯ ವೈದ್ಯಾಧಿಕಾರಿ ಡಾ. ನಾಗಲಕ್ಷ್ಮಮ್ಮ ಹಾಗೂ ಡಿ' ಗ್ರೂಪ್ ನೌಕರ ಟಿ.ಎಚ್. ರವಿಕುಮಾರ್ ಅವರು ಇತ್ತೀಚೆಗೆ ಬೆಂಗಳೂರಿನಲ್ಲಿ ಬಂಧಿತರಾದ ಪಾಕಿಸ್ತಾನಿ ಮೂಲದ ಪ್ರಜೆಗಳು ಆಧಾರ್ ಕಾರ್ಡ್

ಪಡೆಯಲು ನಕಲಿ ದಾಖಲಾತಿಗಳನ್ನು ದೃಢೀಕರಿಸಿ ಹುದ್ದೆಯನ್ನು ದುರುಪಯೋಗ ಪಡಿಸಿಕೊಂಡ ಆರೋಪ ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಅವರನ್ನು ಅಮಾನತು ಮಾಡಲಾಗಿದೆ.

ಚಿಂತಾಮಣಿ ತಾಲ್ಲೂಕು ಬಟ್ಲಹಳ್ಳಿ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಪಿ.ಎಂ. ರವಿ ಅವರು ಕುಡಿದ ಅಮಲಿನಲ್ಲಿ ಆಸ್ಪತ್ರೆಯಲ್ಲಿ ರೋಗಿಗಳೊಂದಿಗೆ ಅನುಚಿತವಾಗಿ ವರ್ತಿಸಿರುವ ಆರೋಪದ ಹಿನ್ನೆಲೆಯಲ್ಲಿ ಅವರನ್ನು ಅಮಾನತು ಮಾಡಲಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಕಟಣೆ ತಿಳಿಸಿದೆ.